ರಾಷ್ಟ್ರೀಯ ಕ್ರೀಡಾ ಗ್ರಾಮಾ ಹಾಗೂ ಎವರೆಸ್ಟ್ ಶಾಲೆಯ

ಹತ್ತಿರ ಸೇತುವೆ ನಿರ್ಮಾಣದ ಬಗ್ಗೆ

1779 (2543) ಶ್ರೀ ಅಶೋಕ ಆರ್. (ಉತ್ತರಹಳ್ಳಿ):

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಷ್ಟ್ರೀಯ ಕ್ರೀಡಾ ಗ್ರಾಮ ಮತ್ತು: ಎವರೆಸ್ಟ್ ಶಾಲೆಯ ಹತ್ತಿರ ಮೋರಿಯ ಮೇಲೆ ಸೇತುವೆಯ ನಿರ್ಮಾಣವನ್ನು ಪೂರ್ಣಗೊಳಿಸಿ ಒಂದು ವರ್ಷವಾದರು ಅಲ್ಲೆ ತಡೆಗೋಡೆ ಪೂರ್ತಿಗೊಳ್ಳದಿರುವುದಕ್ಕೆ ಕಾರಣವೇನು;

(ಆ) ಬೆಂಗಳೂರು ಮಹಾನಗರ ಪಾಲಿಕೆ ಅಧೀನಕ್ಕೆ ಒಳಪಟ್ಟಿರುವ ಈ ಕೆಲಸವನ್ನು ಕೂಡಲೆ ಕೈಗೆತ್ತಿಕೊಳ್ಳಲು ಕ್ರಮ ಜರುಗಿಸಲಾಗುವುದೆ?

ಶ್ರೀ ಎಸ್. ಎಮ್. ಕೃಷ್ಣ (ಮುಖ್ಯಮಂತ್ರಿ)

(ಅಆ) ಸೇತುವೆಯ ವಾಯುವ್ಯ ದಿಕ್ಕಿನಲ್ಲಿನ ತಡೆಗೋಡೆಯ ಮೇಲ್ಭಾಗದ ಸ್ವಲ್ಪ ಭಾಗದ ಕೆಲಸವನ್ನು ಮಾತ್ರ ಈ ಗೋಡೆಯ ಪಕ್ಕದ ನಿವೇಶನದ ಮಾಲೀಕರು ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿದ್ದರಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಆದರೆ ಈಗ ಕೆಲಸವನ್ನು ಪುನಃ ಪ್ರಾರಂಭಿಸಲಾಗಿದ್ದು, ಕೆಲಸವನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುವುದು.

ಬೆಂಗಳೂರು ಹೊರವಲಯದಲ್ಲಿ ಬರುವ ವರ್ತುಲ ರಸ್ತೆ ಕಾಮಗಾರಿ

1780 (2545) ಶ್ರೀ ಆರ್. ಅಶೋಕ (ಉತ್ತರಹಳ್ಳಿ):

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ಹೊರವಲಯದಲ್ಲಿ ಬರುವ ವರ್ತುಲ ರಸ್ತೆ ಭಾಗವಾಗಿ ಮೈಸೂರು ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿ 4 ರವರೆಗೆ ಕಾಮಗಾರಿ ಪ್ರಾರಂಭವಾಗಿದೆಯೇ;

(ಆ) ಇಲ್ಲದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ಇದಕ್ಕಾಗಿ ನಿಗದಿಪಡಿಸಿದ ಹಣವೆಷ್ಟು; ಬಿಡುಗಡೆ ಮಾಡಿರುವ ಹಣ ಎಷ್ಟು; ಖರ್ಚು ಆಗಿರುವ ಹಣ ಎಷ್ಟು?

ಶ್ರೀ ಎಸ್. ಎಮ್. ಕೃಷ್ಣ (ಮುಖ್ಯಮಂತ್ರಿ)

(ಅ) ಇಲ್ಲ.

(ಆ) ಈ ಕಾಮಗಾರಿಗೆ 50 ಕೋಟಿ ರೂ.ಗಳ ಮೊತ್ತವು ಬೇಕಾಗುತ್ತದೆ. ಈ ಕಾಮಗಾರಿಯು ಇನ್ನು ಪ್ರಾರಂಭವಾಗಬೇಕಾಗಿರುವುದರಿಂದ ಹಣ ಬಿಡುಗಡೆ ಅಥವಾ ಖರ್ಚು ಆಗಿರುವುದಿಲ್ಲ.